**ಸಾಕ್ಷಿಗೆ ದಿನಾಂಕ 15-06-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ.ವಿ ಆರ್ ಎಂ ವಕೀಲರಿಂದಃ**

1. ಅಪಘಾತದ ದಿನ ಎಂ ಆರ್ ಎಸ್ ಪಾಳ್ಯದಿಂದ ಚಿಕ್ಕಬಳ್ಳಾಪುರದ ಕಡೆಗೆ ಹೊರಟಿದ್ದೇನು ಎಂದರೆ ಸರಿ. ಅಪಘಾತದ ದಿನ ನಾನು ಹಿಂಬದಿ ಸವಾರನಾಗಿ ಹೋಗುತ್ತಿದ್ದ ದ್ವಿಚಕ್ರ ವಾಹನದ ಮಾಲೀಕ ವಿಘ್ನೇಶ್ ಎನ್ನುವವರು ಇರುತ್ತಾರೆ ಎಂದರೆ ಸರಿ. ಸದರಿ ದ್ವಿಚಕ್ರ ವಾಹನ ಮೋಟಾರ್ ಸೈಕಲ್ ವಿತ್ ಗೇರ್ ಇದ್ದು ಅದು ಹೀರೋ ಹೊಂಡಾ ಕಂಪನಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ದ್ವಿಚಕ್ರ ವಾಹನದ ಮೇಲೆ ನಾನು, ವಿಘ್ನೇಶ್ ಮತ್ತು ತರುಣ ಹೋಗುತ್ತಿದ್ದೇವು ಎಂದರೆ ಸರಿ. ಸದರಿ ದ್ವಿಚಕ್ರ ವಾಹನದ ಮೇಲೆ ಸವಾರ ಮತ್ತು ಒಬ್ಬ ಹಿಂಬದಿ ಸವಾರ ಪ್ರಯಾಣಿಸಬಹುದು ಎಂದರೆ ಸರಿ. ವಿಘ್ನೇಶ್ ರವರನ್ನು ಪೊಲೀಸರು ಎರಡನೇ ಆರೋಪಿಯನ್ನಾಗಿ ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಈ ಅಪಘಾತವು ಬೆಂಗಳೂರು-ಬಳ್ಳಾರಿ ರಸ್ತೆಯ ದೊಡ್ಡಜಾಲದ ಮೇಲ್ಸೆತುವೆಯಿಂದ ಕೆಳಗೆ ಇಳಿಯುವಾಗ ರಾಯಲ್ ಓಕ್ ಮುಂಭಾಗದಲ್ಲಿ ಜರುಗಿದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಸರ್ವೀಸ್ ರಸ್ತೆ ಕೂಡುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಯಾವುದೇ ಟ್ರಾಫಿಕ್ ಸಿಗ್ನಲ್ ಇರುವುದಿಲ್ಲ ಎಂದರೆ ಸರಿ. ಸದರಿ ಸರ್ವೀಸ್ ರಸ್ತೆ ಕೂಡುವ ಸ್ಥಳದಲ್ಲಿ ವಿಶಾಲವಾದ ಸ್ಥಳಾವಕಾಶ ಇದೆ ಎಂದರೆ ಸರಿ. ಸದರಿ ರಸ್ತೆಯು ನೇರ ರಸ್ತೆಯಾಗಿರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಬೆಳಗಿನ ಜಾವ ವಾಹನ ಸಂಚಾರ ದಟ್ಟಣೆ ಕಡಿಮೆ ಇರುತ್ತದೆ ಎಂದರೆ ಸರಿ. ಈಶ ಫೌಂಡೇಶನ್ ಗೆ ಬೆಳಿಗ್ಗೆ 7.30 ಗಂಟೆಗೆ ತಲುಪಬೇಕೆಂದು ಅಂದಾಜು ಮಾಡಿರುತ್ತೇವೆ.

3. ಸದರಿ ರಸ್ತೆಯ ಮಧ್ಯದ ಪಥದಲ್ಲಿ ನಾವು ಸವಾರಿ ಮಾಡುತ್ತಿದ್ದೇವು. ಎರಡನೇ ಎದುರುದಾರರ ವಾಹನವು ನಿಧಾನವಾಗಿ ಚಲಿಸುತ್ತಿತ್ತು. ನಮ್ಮ ದ್ವಿಚಕ್ರ ವಾಹನದ ಸವಾರ ವಿಘ್ನೇಶ್ ರವರು ದ್ವಿಚಕ್ರ ವಾಹನವನ್ನು ನಿಯಂತ್ರಿಸಲಾಗದೇ ಎರಡನೇ ಎದುರುದಾರರ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎರಡನೇ ಎದುರುದಾರರ ವಾಹನದ ಚಾಲಕ ಪಥ ಬದಲಾವಯಿಸುವಾಗ ಯಾವುದೇ ಮುನ್ಸೂಚನೆ ನೀಡದೆ ಪಥ ಬದಲಾಯಿಸಿರುತ್ತಾನೆ ಎಂದು ನುಡಿಯುತ್ತಾರೆ. ನಮ್ಮ ದ್ವಿಚಕ್ರ ವಾಹನದ ಮುಂಭಾಗ ಜಖಂಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಎರಡನೇ ಎದುರುದಾರರ ವಾಹನದ ಹಿಂಬದಿಯ ಎಡಭಾಗಕ್ಕೆ ಜಖಂಗಳು ಆಗಿರುತ್ತವೆ. ನಾವು ಒಟ್ಟು ಮೂರು ಜನ ನಮ್ಮ ದ್ವಿಚಕ್ರ ವಾಹನದ ಮೇಲೆ ಸವಾರಿ ಮಾಡುತ್ತಿದ್ದುದರಿಂದ ಸವಾರ ವಿಘ್ನೇಶ್ ರವರು ದ್ವಿಚಕ್ರ ವಾಹನವನ್ನು ನಿಯಂತ್ರಿಸಲಾಗದೇ ಎರಡನೇ ಎದುರುದಾರರ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ.

4. ಈ ಅಪಘಾತದಲ್ಲಿ ಎರಡನೇ ಎದುರುದಾರರ ವಾಹನದ ಚಾಲಕನ ತಪ್ಪಿಲ್ಲ ಎಂದರೆ ಸರಿಯಲ್ಲ. ಈ ಅಪಘಾತವು ನಮ್ಮ ದ್ವಿಚಕ್ರ ವಾಹನದ ಸವಾರನ ತಪ್ಪಿನಿಂದ ಆಗಿದ್ದರೂ ಸಹ ಎರಡನೇ ಎದುರುದಾರರ ವಾಹನದ ಚಾಲಕನ ವಿರುದ್ಧ ಸುಳ್ಳು ದೂರು ನೀಡಿ, ಪೊಲೀಸರೊಂದಿಗೆ ಶಾಮೀಲಾಗಿ ಎಲ್ಲಾ ಪೊಲೀಸ್ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

5. ಅಪಘಾತದಿಂದ ನನ್ನ ಎಡಗಾಲಿನ ಮೂಳೆ ಮುರಿತ ಉಂಟಾಗಿರುತ್ತದೆ. ಅಪಘಾತದ ನಂತರ ಲೈಫ್ ಕೇರ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಅಲ್ಲಿ 5 ದಿನ ಒಳರೋಗಿಯಾಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನನಗೆ ಶಸ್ತ್ರಚಿಕಿತ್ಸೆಯಾಗಿರುತ್ತದೆ. ಸದರಿ ಆಸ್ಪತ್ರೆಯಲ್ಲಿ ಸಂಪೂರ್ಣ ಚಿಕಿತ್ಸೆಯಾಗಿರುತ್ತದೆ. ಒಳಜೋಡಣೆ ಹಾಗೆಯೇ ಇರುತ್ತದೆ. ಅಪಘಾತದಲ್ಲಿ ಉಂಟಾದ ಗಾಯಗಳು ಸಂಪೂರ್ಣ ವಾಸಿಯಾಗಿವೆ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯಕ್ಕೆ ರೂ.6,00,000/- ವೆಚ್ಚವಾಗಿಲ್ಲ ಎಂದರೆ

ಸರಿಯಲ್ಲ. ನನ್ನ ವೈದ್ಯಕೀಯ ಬಿಲ್ಲುಗಳ ಪಾವತಿ ವಿಚಾರ ನನ್ನ ಪೋಷಕರಿಗೆ ತಿಳಿದಿರುತ್ತದೆ. ನಿಪಿ.15 ಒಳರೋಗಿ ಔಷಧಿ ಬಿಲ್ಲು ಸೃಷ್ಟಿತ ಬಿಲ್ಲು ಎಂದರೆ ಸರಿಯಲ್ಲ. ಸದರಿ ಬಿಲ್ಲುಗಳನ್ನು ಪಾವತಿಸಿದ ಬಗ್ಗೆ ಪಾವತಿ ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ಅಪಘಾತದ ಸಮಯದಲ್ಲಿ ನಾನು ದ್ವಿತೀಯ ಪಿಯುಸಿ ಓದುತಿದ್ದೇನು. ನನ್ನ ಜನ್ಮ ದಿನಾಂಕ 11.03.2007 ಆಗಿರುತ್ತದೆ. ಈ ಅಪಘಾತದಿಂದ ನನ್ನ ಶಿಕ್ಷಣಕ್ಕೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**